EST 3

GPF

28/3

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ-

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ ಆಇ 34 ಮುಭನಿ 2000, ದಿನಾಂಕ:20-10-2000.
2. ಸರ್ಕಾರಿ ಆದೇಶ ಸಂಖ್ಯೆ ಆಇ 23 ಮುಭನಿ 2013, ದಿನಾಂಕ:24-3-2014.

ಪ್ರಸ್ತಾವನೆ:-

ರಾಜ್ಯ ಸರ್ಕಾರಿ ನೌಕರರು ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ/ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ಪ್ರಸ್ತುತ ಜಾರಿಯಲ್ಲಿರುವ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:20.10.2000ದ ಸರ್ಕಾರಿ ಆದೇಶದಲ್ಲಿನ ಅಧಿಕಾರ ಪ್ರತ್ಯಾಯೋಜನೆ ಮಿತಿಯನ್ನು ಪರಿಷ್ಕರಿಸಬೇಕೆಂದು ಇಲಾಖೆಗಳಿಂದ ಬೇಡಿಕೆ ಬರುತ್ತಿವೆ. ಈ ಅಂಶವನ್ನು ಪರಿಶೀಲಿಸಿದ ಸರ್ಕಾರವು ಮೇಲೆ ಕ್ರಸಂ. (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪರಿಷ್ಕೃತ ಅಧಿಕಾರ ಪ್ರತ್ಯಾಯೋಜನೆಯನ್ನು ಹೊರಡಿಸಲಾಗಿತ್ತು. ಪ್ರಸ್ತುತ, ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ಎರಡೂ ಸರ್ಕಾರಿ ಆದೇಶಗಳನ್ನು ಹಿಂಪಡೆದು, ವಿವಿಧ ಹಂತದ ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಮರುಪರಿಷ್ಕರಿಸಲು ನಿರ್ಧರಿಸಿ ಸರ್ಕಾರ ಮುಂದಿನಂತೆ ಆದೇಶಿಸುತ್ತದೆ.

30255
27/4

### ಸರ್ಕಾರಿ ಆದೇಶ ಸಂಖ್ಯೆ: ಆಇ 23 ಮುಭನಿ 2013, ಬೆಂಗಳೂರು, ದಿನಾಂಕ: 25-03-2014

ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ವಿವಿಧ ಹಂತದ ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೆಳಕಂಡಂತೆ ಮರುಪರಿಷ್ಕರಿಸಿದೆ.

3/4/14

I) ತಾತ್ಕಾಲಿಕ ಮುಂಗಡ: (ಸರ್ಕಾರದ ಆದೇಶ ಸಂಖ್ಯೆ:ಆಇ 48 ಮಕಮು 1994, ದಿ:21.10.1994ರಲ್ಲಿ ಮನೆಗೆ ಕೊಂಡೊಯ್ಯುವ ವೇತನದ [Take Home Salary] ಬಗ್ಗೆ ಸೂಚಿಸಿರುವ ಮಿತಿಯಂತೆ ಹಾಗೂ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 16ರನ್ವಯ ಮರುಸಂದಾಯ ಅವಧಿಯನ್ನು ಚಂದಾದಾರನ ಲಭ್ಯವಿರುವ ಸೇವಾ ಅವಧಿಗನುಸಾರ ನಿಗಧಿಪಡಿಸುವ ಷರತ್ತಿಗೆ ಒಳಪಡತಕ್ಕದ್ದು.)

| ಕ್ರಸಂ. | ಹಂತ | ಅಧಿಕಾರ ಪ್ರತ್ಯಾಯೋಜನೆ |
|---|---|---|
| 1 | ಇಲಾಖಾ ಮುಖ್ಯಸ್ಥರು | ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.80ರಷ್ಟು ಮುಂಗಡ ಮಂಜೂರು ಮಾಡಬಹುದು. |
| 2 | ಜಂಟಿ ನಿರ್ದೇಶಕರು/ ನಿಯಂತ್ರಣಾಧಿಕಾರಿಗಳು | ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ರೂ.2,00,000/- ಮಿತಿಗೊಳಪಟ್ಟು ಒಟ್ಟಾರೆ ಸೇವೆಯಲ್ಲಿ 3 ಬಾರಿ ಮುಂಗಡ ಮಂಜೂರು ಮಾಡಬಹುದು. |
| 3 | ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು | ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ರೂ.1,00,000/- ಮಿತಿಗೊಳಪಟ್ಟು ಒಟ್ಟಾರೆ ಸೇವೆಯಲ್ಲಿ 3 ಬಾರಿ ಮುಂಗಡ ಮಂಜೂರು ಮಾಡಬಹುದು. |

...2

II) [illegible] ಅಂತಿಮ ಹಣ ವಾಪಸಾತಿ

| ಕ್ರಸಂ. | ಹಂತ | ಅಧಿಕಾರ ಪ್ರತ್ಯಾಯೋಜನೆ |
|---|---|---|
| 1 | ಇಲಾಖಾ ಮುಖ್ಯಸ್ಥರು | ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ.90ರಷ್ಟು ಮಂಜೂರು ಮಾಡಬಹುದು. |
| 2 | ಜಂಟಿ ನಿರ್ದೇಶಕರು/ ನಿಯಂತ್ರಣಾಧಿಕಾರಿಗಳು | ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ.80ರಷ್ಟು ಮಂಜೂರು ಮಾಡಬಹುದು. |
| 3 | ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು | ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ.70ರಷ್ಟು ಮಂಜೂರು ಮಾಡಬಹುದು. |

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 1957ಕ್ಕೆ ಪ್ರತ್ಯೇಕವಾಗಿ ತಿದ್ದುಪಡಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್ ಲಕ್ಷ್ಮಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಸಿ3(6)ಪ್ರಾ.ಶಿ ಸಾ.ಭ.ನಿ ಅ.ಪ್ರ –01/2014–15 ದಿನಾಂಕ: 15–04–2014

**ಜ್ಞಾಪನ**

ಸರ್ಕಾರದ ಪತ್ರ ಸಂಖ್ಯೆ. ಆಇ 23 ಮುಭನಿ 2013 ದಿನಾಂಕ:25.03.2014 ರ ಪತ್ರದ ಯಥಾಪ್ರತಿಯನ್ನು ಕಳುಹಿಸುತ್ತಾ, ಸರ್ಕಾರದ ನಿರ್ದೇಶನದಂತೆ ಕ್ರಮ ವಹಿಸಲು ತಿಳಿಸಿದೆ.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಗೆ

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾ.ಶಿ.ಇಲಾಖೆ, ಸೂಕ್ತ ಕ್ರಮಕ್ಕಾಗಿ

ಪ್ರತಿ

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ಮತ್ತು ಧಾರವಾಡ ಇವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ಸಾ.ಶಿ.ಇಲಾಖೆ, ಇವರಿಗೆ ಮಾಹಿತಿಗಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಂಬಂದಿಸಿದ ಉಪನಿರ್ದೇಶಕರ ಮೂಲಕ ಮಾಹಿತಿಗಾಗಿ.
4. ಕಛೇರಿ ಪ್ರತಿ.